ನೀಡುವುದೇ ಧರ್ಮ' ಎಂಬ ಮಾತು ನಿಜವೆನಿಸಿತು. ಅನ್ನದ ಮುಂದೆ ಗೊಡ್ಡು ವಾದ-ವಿವಾದಗಳು ತಲೆಬಾಗುತ್ತವೆ ಎಂಬುದು ಅವನ ತಿಳಿವಿಗೆ ಬಂದಿತು.

'ಹಾಗಾದರೆ, ನನ್ನಿಂದ ನಿಮಗೇನಾಗಬೇಕು ಹೇಳಿ. ನನ್ನ ಅಧಿಕಾರವನ್ನು ಬಳಸಿ ಎಲ್ಲವನ್ನೂ ಮಾಡಿಕೊಡುತ್ತೇನೆ' ಎಂದ.

'ಹಾಗಾದರೆ ನೀನು ಮೊದಲು ನಿನ್ನ ಸೆರೆಮನೆಯಲ್ಲಿರುವ ಸೆರೆಯಾಳುಗಳನ್ನು ಕೂಡಲೇ ಬಿಡುಗಡೆಗೊಳಿಸು. ಅವರಿಗೆಲ್ಲಾ ಸೂಕ್ತವಾದ ಉದ್ಯೋಗ ಕೊಡು. ಸೆರೆಮನೆಯನ್ನು ಅನ್ನಶಾಲೆಯನ್ನಾಗಿ ಮಾಡು. ನಿನ್ನ ಆಯುಧಾಗಾರವನ್ನು ಧರ್ಮಶಾಲೆಯನ್ನಾಗಿ ಮಾಡು. ನಿನ್ನ ನಗರದಲ್ಲಿ ಒಂದು ಜೀವಿಯೂ ಹಸಿವಿನಿಂದ ನರಳದಂತೆ ನೋಡಿಕೋ. ಏಕೆಂದರೆ, ಹಸಿವಿನಿಂದ ಇರುವ ರಾಜ್ಯದಲ್ಲಿ ಯಾರೂ ಮುಕ್ತಿ ಹೊಂದಲಾರರು. ದೊರೆಯೇ ನಿನಗೆ ಹೇಳುವ ಕೊನೆಯ ಮಾತೆಂದರೆ; ಬಡವರ ಹಸಿವಿನ ಸಿಟ್ಟು ಕತ್ತಿಗಿಂತ ಹರಿತವಾದದ್ದು. ಅದು ಯಾರನ್ನೂ ಉಳಿಸುವುದಿಲ್ಲ. ಇದನ್ನು ನೆನಪಿಟ್ಟುಕೋ' ಎಂದು ಹೇಳಿ, ಮಣಿಮೇಕಲೆ ಧ್ಯಾನ ಮಂದಿರಕ್ಕೆ ಹೊರಟಳು.

ಮಾವನ್ ಕಿಲ್ಲೆ ಏನನ್ನೂ ಮಾತನಾಡಲಿಲ್ಲ. ಇವೆಲ್ಲ ನನ್ನಿಂದ ಸಾಧ್ಯವೆ? ಎನಿಸತೊಡಗಿತು ಅವನಿಗೆ. ಮಣಿಮೇಕಲೆಯ ಮಾತುಗಳಲ್ಲಿದ್ದ ಸತ್ಯ ಗೋಚರವಾದರೂ ಒಂದು ಬಗೆಯ ಹಿಂಜರಿಕೆ, ಆತಂಕಗಳು ಅವನೊಳಗೆ ಬಂದು ಹಾಗೆಯೇ ಮಾಯವಾಗುತ್ತಿದ್ದವು. ಜನ ಇದಕ್ಕೆ ಒಪ್ಪುತ್ತಾರೋ ಇಲ್ಲವೋ! ಮಂತ್ರಿಮಂಡಲದವರು ಇದನ್ನೆಲ್ಲಾ ಅನುಷ್ಠಾನಕ್ಕೆ ತರುತ್ತಾರೋ ಇಲ್ಲವೋ! ಪುರೋಹಿತರು, ವರ್ತಕರು ಇವರೆಲ್ಲಾ ಈ ಬದಲಾವಣೆಯನ್ನು ಸ್ವೀಕರಿಸುತ್ತಾರೋ! ಇದೇ ಹೋಯ್ದಾಟ ಅವನ ಮನಸ್ಸಿನಲ್ಲಿ ನಡೆಯಿತು. ಹಲವು ಗಳಿಗೆಯ ತಾಕಲಾಟಗಳ ನಂತರ ಅವನ ಮನಸ್ಸು ರವಷ್ಟು ದೃಢವಾಯಿತು. 'ಜನರ ಹಸಿವೆಯನ್ನು ನೀಗಿಸಲು ಯಾವುದೇ ಬಗೆಯ ತ್ಯಾಗಕ್ಕೂ ಸಿದ್ದನಿರಬೇಕು' ಎಂದುಕೊಂಡು, ಇವೆಲ್ಲವೂ ನನ್ನಿಂದ ಸಾಧ್ಯ ಎಂದು ತೀರ್ಮಾನಿಸಿಕೊಂಡ.

* * *

ಮಧುರೆಯಿಂದ ಹೊರಟ ಅವರ ಕಾಲುಗಳು



ಪುಹಾರ್ ಕಡೆಗೆ ನಡೆಯುತ್ತಿದ್ದವು. ನಡೆದೂ ನಡೆದೂ ಮರಗಟ್ಟಿದ್ದ ಅವರ ಕಾಲುಗಳು ಸೋತು ಸುಣ್ಣವಾಗಿದ್ದವು. ಒಡೆದುಹೋಗಿ ದೂಳು ಮೆತ್ತಿಕೊಂಡ ಅವರ ಹಿಮ್ಮಡಿಗಳಿಂದ ಅಲ್ಲಲ್ಲಿ ರಕ್ತ ಜಿನುಗುತ್ತಿತ್ತು. ಅವರೆಲ್ಲರ ದೇಹ ಒಂದು ಒರಟಾದ ಕಲ್ಲಿನ ವಿಗ್ರಹದಂತೆ ಕಾಣುತ್ತಿದ್ದವು. ಅವರ ಕಪೋಲಗಳ ಮೇಲೆ ಹರಿದಿದ್ದ ಕಂಬನಿಯೂ ಕೂಡ ಕಲ್ಲಾಗಿತ್ತು. ಅವರ ದೇಹದಲ್ಲಿ ಉತ್ಸಾಹ ಇಲ್ಲದಿದ್ದರೂ, ಚೈತನ್ಯ ಮಾತ್ರ ಕುಂದಿರಲಿಲ್ಲ!

ಇದ್ದಕ್ಕಿದ್ದ ಹಾಗೆ ತಾವು ಕಂಡಿದ್ದ ಕಾಂಚೀಪುರದ ಮುಗುಳುನಗೆ ಅವರಿಗೆ ನೆನಪಾಯಿತು. ಕಷ್ಟದಲ್ಲಿರುವಾಗ ಕಳೆದ ದಿನಗಳ ನೆನಪುಗಳು ನುಗ್ಗಿ ಬರುವುದು ಸಹಜ! ವಿಚಿತ್ರ ನೆನಪುಗಳು. 'ನಾವು ಯಾರೂ ಕೂಡ ಆ ನೆನಪುಗಳನ್ನು ಮರೆಯಲಾರೆವು! ಹುಣ್ಣಿಮೆಯ ದಿನದಲ್ಲಿ ನಡೆಯುತ್ತಿದ್ದ ಚಿತ್ರೆಯ ಹಬ್ಬ, ಈ ಹಬ್ಬಕ್ಕೆ ಎಲ್ಲಾ ಕೆಲಸಗಳನ್ನು ಬದಿಗಿಟ್ಟು ಮಧುರೆಗೆ ಸಾಲು ಗಾಡಿಗಳಲ್ಲಿ ಹೋಗುತ್ತಿದ್ದ ದಿನಗಳು. ವೈಗೈ ನದಿಯ ದಡದಲ್ಲಿ ಕುಳಿತು ಮುತ್ತುಗದ ಎಲೆಯಲ್ಲಿ ಕಂಬಿನ ಅಡೆಯನ್ನು ತಿನ್ನುತ್ತಿದ್ದ ನೆನಪು. ಕಾರ್ತಿಗೈ ದೀಪಂ ಹಬ್ಬದಲ್ಲಿ ಎಲ್ಲರ ಮನೆಯ ಮುಂದೆ ಸಾಲು ಸಾಲು ದೀಪಗಳನ್ನು ಹಚ್ಚುತ್ತಿದ್ದ ಸಡಗರ. ತೈಪೂಸಂ ಹಬ್ಬದಲ್ಲಿ ಕರಗ ಹೊತ್ತವರು ಮತ್ತು ಕಾವಡಿ ಕುಣಿಸುವವರ ನೃತ್ಯ ನೋಡುತ್ತಾ ಮೈಮರೆಯುತ್ತಿದ್ದ ದಿನಗಳು ಎಲ್ಲವೂ ನೆನಪಾದವು. ಬಂಧು ಬಾಂಧವರೊಂದಿಗೆ ಬೆರೆಯುತ್ತಿದ್ದ ಗಳಿಗೆಗಳು. ಗದ್ದೆ